## ಕರ್ನಾಟಕ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 328 |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಕ್ಕಮಗಳೂರು ನಗರದಲ್ಲಿ ಇರುವ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; ಹಾಗೂ ಯಾವುವು:</td><td>ಚಿಕ್ಕಮಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 06 ಘೋಷಿತ ಕೊಳಗೇರಿಗಳಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ- ಸರ್ವರಿಗೂ ಸೂರು (PMAY-HFA) ಯೋಜನೆಯಡಿ ಚಿಕ್ಕಮಗಳೂರು ನಗರದ ಕೊಳಚೆ ಪ್ರದೇಶಗಳಿಗೆ ಯಾವ ದಿನಾಂಕದಂದು ಮಂಜೂರಾಗಿರುವ, ಕಾಮಗಾರಿ ಆರಂಭವಾಗಿರುವ, ಪೂರ್ಣಗೊಂಡಿರುವ ಹಾಗೂ ರದ್ದುಪಡಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು:</td><td>ಚಿಕ್ಕಮಗಳೂರು ನಗರಕ್ಕೆ ಮಂಜೂರಾಗಿರುವ ಮನೆಗಳ ಕಾಮಗಾರಿಯ ಪ್ರಗತಿಯ ವಿವರಗಳು ಈ ಕೆಳಕಂಡತ್ತಿರುತ್ತವೆ.
<table>
<tr><th>ಕ್ರ ಸಂ</th><th>ವಿಧಾನ ಸಭಾ ಕ್ಷೇತ್ರ</th><th>ಮಂಜೂರಾದ ದಿನಾಂಕ</th><th>ಮಂಜೂರಾದ ಮನೆಗಳ ಸಂಖ್ಯೆ</th><th>ಪೂರ್ಣಗೊಂಡಿರುವ ಮನೆಗಳ ಸಂಖ್ಯೆ</th><th>ಪ್ರತಿಯಲ್ಲಿರುವ ಮನೆಗಳ ಸಂಖ್ಯೆ</th><th>ಪ್ರಾರಂಭಿಸದ ಇರುವ ಮನೆಗಳ ಸಂಖ್ಯೆ</th></tr>
<tr><td rowspan="2">1</td><td rowspan="2">ಚಿಕ್ಕಮಗಳೂರು</td><td>26.08.2017</td><td>280</td><td>184</td><td>96</td><td>0</td></tr>
<tr><td>22.07.2020</td><td>500</td><td>40</td><td>90</td><td>370</td></tr>
<tr><td></td><td>ಒಟ್ಟು</td><td></td><td>780</td><td>224</td><td>186</td><td>370</td></tr>
</table></td></tr>
<tr><td>ಇ)</td><td>ರದ್ದು ಪಡಿಸಲು ಕಾರಣಗಳೇನು; (ವಿವರ ನೀಡುವುದು)</td><td>1. ಸರ್ಕಾರದ ಆದೇಶ ಸಂಖ್ಯೆ ವಇ 148 ಹೆಚ್‌ಎಫ್‌ಎ 2023, ದಿನಾಂಕ:30.12.2023ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಅನುಮೋದನೆಗೊಂಡಿರುವ 1,80,253 ಮನೆಗಳ ಪೈಕಿ ಪ್ರಾರಂಭಿಸಿರುವ 1,18,359 ಮನೆಗಳನ್ನು ಮಾತ್ರ ನಿರ್ಮಿಸಲು ಮಿತಿಗೊಳಿಸಿ, ಇನ್ನೂ ಪ್ರಾರಂಭಿಸದೇ ಇರುವ 61,894 ಮನೆಗಳನ್ನು ಕಡಿತಗೊಳಿಸಲಾಗಿತ್ತು. ಪ್ರಾರಂಭಿಸಲು ಬಾಕಿ ಇರುವ 370 ಮನೆಗಳು ಈ ಮೇಲಿನ 61894 ಗಳಲ್ಲಿ ಸೇರಿಕೊಂಡಿತ್ತು. ತದನಂತರ ದಿನಾಂಕ:17.04.2025ರ ಸರ್ಕಾರದ ಆದೇಶದಂತೆ, ಕಡಿತಗೊಳಿಸಿದ್ದ 61894 ಮನೆಗಳನ್ನು ಪ್ರಾರಂಭಿಸಲು ಆದೇಶವಾಗಿರುತ್ತದೆ.</td></tr>
</table>

<table>
<tr>
<td></td>
<td></td>
<td>
2. ಈ ಯೋಜನೆಯಡಿ ಸ್ಥಗಿತಗೊಳಿಸಲಾಗಿದ್ದ, 60241 ಮನೆಗಳನ್ನು ಪುನರ್ ಪ್ರಾರಂಭಿಸುವ ಬಗ್ಗೆ ದಿನಾಂಕ:22.04.2025 ಮತ್ತು ದಿನಾಂಕ:25.04.2025 ರಂದು ಮಾನ್ಯ ಜಂಟಿ ಕಾರ್ಯದರ್ಶಿಗಳು, MoHUA, New Delhi ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮತ್ತು ದಿನಾಂಕ: 27.06.2025 ರ ಇ-ಮೇಲ್ ನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯು ಡಿಸೆಂಬರ್-2025ರ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ, ಕೇಂದ್ರ ಸರ್ಕಾರವು ಕೇಂದ್ರದ ಸಹಾಯ ಧನವನ್ನು ನೀಡಲು ಸಾಧ್ಯವಾಗದ ಬಗ್ಗೆ ತಿಳಿಸಿರುತ್ತಾರೆ.
3. ಸದರಿ ಯೋಜನಾ ಅನುಷ್ಠಾನ ಅವಧಿಯು ಡಿಸೆಂಬರ್-2025ಕ್ಕೆ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಸದರಿ 60,241 ಮನೆಗಳನ್ನು ಪ್ರಾರಂಭಿಸುವ ಬಗ್ಗೆ ಮತ್ತು ಈ ಮನೆಗಳಿಗೆ ಕೇಂದ್ರ/ರಾಜ್ಯ ಸರ್ಕಾರದ ಸಹಾಯಧನ ಒದಗಿಸಿಕೊಡುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. ಅದರಂತೆ, ಅನುದಾನವನ್ನು ಒದಗಿಸಿಕೊಂಡು ಮನೆಗಳ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.
</td>
</tr>
<tr>
<td>ಈ)</td>
<td>ಟೆಂಡರ್ ನಿಯಮಾವಳಿ ಪ್ರಕಾರ ಯಾವ ಕಾಲಮಿತಿಯಲ್ಲಿ ಮನೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು; ಮನೆ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿರುವುದರಿಂದ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ರೀತಿ ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು; ಈ ಮನೆಗಳು ಕಾಮಗಾರಿಯನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಯಾವಾಗ ನೀಡಲಾಗುವುದು; (ಸಮಗ್ರ ವಿವರ ಒದಗಿಸಿ)</td>
<td>
<table>
<tr><th>ಕ್ರ ಸಂ</th><th>ವಿಧಾನ ಸಭಾ ಕ್ಷೇತ್ರ</th><th>ಮಂಜೂರಾದ ದಿನಾಂಕ</th><th>ಮಂಜೂರಾದ ಮನೆಗಳ ಸಂಖ್ಯೆ</th><th>ಕಾರ್ಯಾದೇಶ ದಿನಾಂಕ</th><th>ಪೂರ್ಣಗೊಳಿಸಬೇಕಾದ ಕಾಲಮಿತಿ</th></tr>
<tr><td rowspan="2">1</td><td rowspan="2">ಚಿಕ್ಕಮಗಳೂರು</td><td>26.08.2017</td><td>280</td><td>04.12.2018</td><td>15 ತಿಂಗಳು</td></tr>
<tr><td>22.07.2020</td><td>500</td><td>06.11.2021</td><td>18 ತಿಂಗಳು</td></tr>
<tr><td></td><td>ಒಟ್ಟು</td><td></td><td>780</td><td></td><td></td></tr>
</table>
ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿವೆ:
<ul>
<li>ಫಲಾನುಭವಿಗಳು ಹಾಲಿ ವಾಸವಿರುವ ಕಚ್ಚಾ-ಸೆಮಿಪಕ್ಕಾ ಮನೆಗಳನ್ನು ಖಾಲಿ ಮಾಡಿಕೊಡುವಲ್ಲಿ ವಿಳಂಭವಾಗಿರುತ್ತದೆ.</li>
<li>ಫಲಾನುಭವಿಗಳು ಪ್ರಾರಂಭಿಕ ವಂತಿಕೆ ಹಣ ಪಾವತಿಸಲು ವಿಳಂಬ ಮಾಡಿರುವುದರಿಂದ ನಿಗಧಿತ ಅವಧಿಯಲ್ಲಿ ಭೌತಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ.</li>
<li>ದಿನಾಂಕ:09.08.2019 ರಿಂದ 12.12.2019 ರವರೆಗೆ ಸುಮಾರು 125 ದಿವಸಗಳು ಮತ್ತು ದಿನಾಂಕ: 23.03.2020 ರಿಂದ ದಿನಾಂಕ:17.05.2020 ರವರೆಗೆ ಸುಮಾರು 55 ದಿವಸಗಳು ಒಟ್ಟು 180 ದಿನಗಳು ಕೋವಿಡ್-19 ಲಾಕ್-ಡೌನ್ ನಿಂದ ಕಾಮಗಾರಿ</li>
</ul>
</td>
</tr>
</table>

ಸ್ಥಗಿತಗೊಂಡಿರುತ್ತದೆ.

- ಸರ್ಕಾರ ಆದೇಶ ಸಂಖ್ಯೆ: ವಇ 16 ಹೆಚ್‌ಎಫ್‌ಎ 2019, ದಿನಾಂಕ:11.07.2019 ರಂದು ಹೊಸದಾಗಿ ಪ್ರಾರಂಭಿಸುವ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರವು ನಿರ್ದೇಶನ ನೀಡಿದ್ದು, ಸರ್ಕಾರ ಆದೇಶ ಸಂಖ್ಯೆ: ವಇ 16 ಹೆಚ್‌ಎಫ್‌ಎ 2019, ದಿನಾಂಕ:12.12.2019 ರನ್ವಯ ಕಾಮಗಾರಿಯನ್ನು ಪ್ರಾರಂಭಿಸಿರುವ ಹಿನ್ನೆಯಲ್ಲಿ ಸುಮಾರು 6 ತಿಂಗಳ ಕಾಲ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

- ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಫಲಾನುಭವಿಗಳು ಫಲಾನುಭವಿ ವಂತಿಕೆ ಪಾವತಿಸಲು ಹಾಗೂ ಬ್ಯಾಂಕ್‌ಗಳಿಂದ ಫಲಾನುಭವಿಗಳ ಹೆಸರಿನಲ್ಲಿ ಸಾಲ ಸೌಲಭ್ಯ ಪಡೆಯಲು ಮುಂದೆ ಬರುತ್ತಿಲ್ಲವಾದ್ದರಿಂದ ಮನೆಗಳ ನಿಗಧಿತ ಭೌತಿಕ ಪ್ರಗತಿ ಸಾಧಿಸಲು ಸಾಧ್ಯವಾಗದೆ, ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುತ್ತದೆ.

- ಮನೆಗಳ ನಿರ್ಮಾಣ ಜಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣಗಳಿಂದ ಕಾಮಗಾರಿಯಲ್ಲಿ ವಿಳಂಭವಾಗಿರುತ್ತದೆ.

- ಸದರಿ ಕಾಮಗಾರಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಬಿಡುಗಡೆಯಾಗುವಲ್ಲಿ ಕಾಮಗಾರಿ ವಿಳಂಭವಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ವಇ 148 ಹೆಚ್.ಎಫ್.ಎ 2023, ದಿನಾಂಕ:30.12.2023ರಂತೆ ಫಲಾನುಭವಿಗಳಿಂದ ಪ್ರತಿ ಮನೆಗೆ ಗರಿಷ್ಠ ರೂ. 1.00 ಲಕ್ಷಗಳ ಫಲಾನುಭವಿ ವಂತಿಕೆ ಪಾವತಿಸಿಕೊಂಡು ಉಳಿದ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲು ಆದೇಶ ಹೊರಡಿಸಲಾಗಿದೆ. ಅದರಂತೆ, ಮನೆಗಳ ಘಟಕ ವೆಚ್ಚ ಮಾದರಿಗಳು ಈ ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

| ಮನೆಗಳ ಘಟಕ ವೆಚ್ಚ | ಕೇಂದ್ರ ಸರ್ಕಾರದ ಸಹಾಯಧನ | ರಾಜ್ಯ ಸರ್ಕಾರದ ಸಹಾಯಧನ | | ಫಲಾಭವಿ ವಂತಿಕೆ | |
|---|---|---|---|---|---|
| | | ಪರಿಶಿಷ್ಟ ಜಾತಿ/ಪಂಗಡ | ಇತರೇ ವರ್ಗ | ಫಲಾನುಭವಿಗಳು ಭರಿಸಬೇಕಾದ ಮೊತ್ತ | ರಾಜ್ಯ ಸರ್ಕಾರ |
| 6.74 | 1.50 | 2.00 | 1.20 | 1.00 | 2.24 (SC/ST) |
| | | | | | 3.04 (Others) |

ಪ್ರಗತಿಯಲ್ಲಿರುವ ಹಾಗೂ ಸ್ಥಗಿತಗೊಂಡಿರುವ ಮನೆಗಳನ್ನು ಪ್ರಾರಂಭಿಸಿ, ಫಲಾನುಭವಿಗಳಿಂದ ರೂ.1.00 ಲಕ್ಷ ಪಾವತಿಸಿಕೊಂಡು, ಕೇಂದ್ರ ಹಾಗೂ

| | | |
|---|---|---|
| | | ರಾಜ್ಯ ಸರ್ಕಾರ ಸಹಾಯಧನ ಮತ್ತು ಸರ್ಕಾರದಿಂದ ಬಿಡುಗಡೆಯಾಗುವ ಫಲಾನುಭವಿಗಳ ವಂತಿಕೆ ಅನುಗುಣವಾಗಿ, ಯೋಜನಾ ಅನುಷ್ಠಾನದ ಅವಧಿ ಡಿಸೆಂಬರ್-2025ರ ಅಂತ್ಯಕ್ಕೆ ಇದ್ದು, ಸದರಿ ಅವಧಿಯೊಳಗೆ ಮನೆಗಳ ನಿರ್ಮಾಣ ಕಾಮಗಾರಿಯನ್ನು ಹಂತ - ಹಂತವಾಗಿ ಪೂರ್ಣಗೊಳಿಸಿ ಹಂಚಿಕೆಗೆ ಕ್ರಮ ವಹಿಸಲಾಗುವುದು. |
| ಉ) | ಫಲಾನುಭವಿ ವಂತಿಗೆಯಾಗಿ 1 ಲಕ್ಷ ರೂ.ಗಳನ್ನು ಪಾವತಿಸುವುದನ್ನು ಕಡ್ಡಾಯಗೊಳಿಸಿರುವುದರಿಂದ ಅಷ್ಟು ಪ್ರಮಾಣದ ಹಣವನ್ನು ನೀಡುವುದು ಫಲಾನುಭವಿಗಳಿಗೆ ಕಷ್ಟವಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಫಲಾನುಭವಿ ವಂತಿಗೆಯನ್ನು ಸರ್ಕಾರದಿಂದಲೇ ಪಾವತಿಸಲು ಕ್ರಮ ವಹಿಸಲಾಗುವುದೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಂಖ್ಯೆ: ವಇ 151 ಹೆಚ್‌ಎಫ್‌ಎ 2025]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.

## ಅನುಬಂಧ-'ಅ'

| ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರದ ಹೆಸರು | ಕೊಳಚೆ ಪ್ರದೇಶದ ಹೆಸರು | ಮಾಲೀಕತ್ವ | ವಿಸ್ತೀರ್ಣ | ಘೋಷಣೆಯಾದ ದಿನಾಂಕ |
|---|---|---|---|---|---|
| 1 | ಚಿಕ್ಕಮಗಳೂರು | ತಮಿಳ್ & ಭೋವಿ ಕಾಲೋನಿ | ನಗರಸಭೆ | 4-35 | 04-01-1990 |
| 2 | ಚಿಕ್ಕಮಗಳೂರು | ಸ್ಯಾಂಡಿ ತಲಾಪ್ | ನಗರಸಭೆ | 3-21 | 01-03-1988 |
| 3 | ಚಿಕ್ಕಮಗಳೂರು | ಮುತ್ತಿನ್ನಮ ದೇವಸ್ಥಾನದ ಪೂರ್ವ ಭಾಗ (ಶಂಕರಪುರ) | ಖಾಸಗಿ | 3-10 | 24-07-1986 |
| 4 | ಚಿಕ್ಕಮಗಳೂರು | ವಸ್ತಾರಗೇಟ್ | ನಗರಸಭೆ | 0-28 | 26-03-1990 |
| 5 | ಚಿಕ್ಕಮಗಳೂರು | ದಂಟರಮಕ್ಕಿ (ಕೇರಿಕೋಡಿಯಮ್ಮ ದೇವಸ್ಥಾನ) | ನಗರಸಭೆ/ ಗ್ರಾಮಠಾಣ | 0-21 | 28-09-1988 |
| 6 | ಚಿಕ್ಕಮಗಳೂರು | ಹಿರೇಮಗಳೂರು ಬಸ್ ನಿಲ್ದಾಣ | ಖಾಸಗಿ | 1-14 | 28-09-1988 |

ಸಹಾಯಕ ಕಂದಾಯ ಅಧಿಕಾರಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಲಿ
ಬೆಂಗಳೂರು.

Scanned with OKEN Scanner